ಇಂದು ದಿನಾಂಕಃ 04.01.2021 ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ಮಾಡಿಸಲಾಯಿತು.

**ಪಾಟೀ ಸವಾಲುಃ** 3, 7 ರಿಂದ 9 ನೇ ಪ್ರತಿವಾದಿಗಳ ಪರ ಶ್ರೀ ಬಿ.ಎನ್.ಬಿ. ವಕೀಲರಿಂದಃ

1. ನನ್ನ ತಂದೆಯ ಹೆಸರು ಶಂಕರಪ್ಪ ಎಂದರೆ ಸರಿ. ನನ್ನ ತಂದೆಗೆ ಬಸಮ್ಮ ಮತ್ತು ಗೌರಮ್ಮ ಎಂಬುವ ಇಬ್ಬರು ಹೆಂಡತಿಯರು ಇದ್ದರು ಎಂದರೆ ಸರಿ. ನಾನು ಹಾಗೂ 1 ಮತ್ತು 2 ನೇ ಪ್ರತಿವಾದಿಗಳು 1 ನೇ ಹೆಂಡತಿ ಬಸಮ್ಮ ಅವರಿಗೆ ಜನಿಸಿದ ಮಕ್ಕಳು ಎಂದರೆ ಸರಿ. 4 ರಿಂದ 7 ನೇ ಪ್ರತಿವಾದಿಗಳು ನನ್ನ ತಂದೆ ಶಂಕರಪ್ಪ ಇವರಿಗೆ 2 ನೇ ಹೆಂಡತಿ ಗೌರಮ್ಮ ಅವರ ಮುಖಾಂತರ ಜನಿಸಿದವರು ಎಂದರೆ ಸರಿ. ನನ್ನ ಅಕ್ಕ 1 ನೇ ಪ್ರತಿವಾದಿ ಮರಣ ಹೊಂದಿರುತ್ತಾರೆ ಎಂದರೆ ಸರಿ. 1 ನೇ ಪ್ರತಿವಾದಿಯ ಮಗಳಾದ ಪುಷ್ಪಾ ಅವರು ನನ್ನ ಹೆಂಡತಿ ಎಂದರೆ ಸರಿ.

2. ನನ್ನ ಮತ್ತು ಪ್ರತಿವಾದಿಯರ ಕುಟುಂಬಕ್ಕೆ ಒಟ್ಟು 33 ಎಕರೆ ಜಮೀನು ಇದೆ ಎಂದರೆ ಸರಿ. ಸದರಿ ಒಟ್ಟು 33 ಎಕರೆ ಜಮೀನುಗಳಲ್ಲಿ ಬಸಮ್ಮ ಇವರಿಗೆ ಸೇರಿದ ಪ್ರತಿನಿಧಿಗಳು ಅರ್ಧ ಜಮೀನನ್ನು ವಹಿವಾಟು ಮಾಡುತ್ತಿದ್ದು, ಅದೇ ರೀತಿ ಗೌರಮ್ಮ ಅವರಿಗೆ ಸೇರಿದ ವಾರಸುದಾರರು ಅರ್ಧದಷ್ಟು ಜಮೀನನ್ನು ಪ್ರತ್ಯೇಕವಾಗಿ ವಹಿವಾಟು ಮಾಡುತ್ತಾ ಬಂದಿರುತ್ತೇವೆ. ಸಾಕ್ಷಿಯು ಮುಂದುವರೆದು ಯಾವುದೇ ಕಾನೂನು ಪ್ರಕಾರ ಹಿಸ್ಸೆ ಆಗಿರುವುದಿಲ್ಲ ಎಂದು ನುಡಿದಿರುತ್ತಾರೆ.

3. 1991 ನೇ ಇಸವಿಯಲ್ಲಿ ನನ್ನ ಮತ್ತು ಪ್ರತಿವಾದಿಗಳ ನಡುವೆ ಒಟ್ಟು ಕುಟುಂಬದ ಜಮೀನುಗಳನ್ನು ಆಪಸಾತ್‌ನಲ್ಲಿ ಹಿಸ್ಸೆ ಮಾಡಿಕೊಂಡಿರುತ್ತೇವೆ ಎಂದರೆ ಸರಿಯಲ್ಲ. ಸದರಿ ಆಪಸಾತ್ ಹಿಸ್ಸೆಯ ಪ್ರಕಾರ ಕಳಗೊಂಡ ಗ್ರಾಮದ 'ಡ' ಸಂಖ್ಯೆ: 1544 ರಂತೆ ಮಂಜೂರು ಆಗಿದ್ದು, ಸದರಿ ಮಂಜೂರಾತಿಯಂತೆ ದಾವಾ ಶೆಡ್ಯೂಲ್ 'ಎ' ಆಸ್ತಿಗಳ ಪೈಕಿ ಐಟಂ ನಂಬರಃ 1 ರಿಂದ 7 ರ ಆಸ್ತಿಗಳು ನನ್ನ ಮತ್ತು 7 ನೇ ಪ್ರತಿವಾದಿಯ ಜಂಟಿ ಹೆಸರಿನಲ್ಲಿ ಇವೆ ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನನಗೆ ಗೊತ್ತಿಲ್ಲದ ರೀತಿಯಲ್ಲಿ ಜಂಟಿ ಖಾತೆಯನ್ನು ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. ಅದೇ ರೀತಿ ದಾವಾ ಶೆಡ್ಯೂಲ್ 'ಎ' ರ ಐಟಂ ನಂಬರಃ 9 ಮತ್ತು 10 ರ ಸ್ವತ್ತುಗಳು 7 ನೇ ಪ್ರತಿವಾದಿಯ ಹೆಸರಿನಲ್ಲಿ ಮಂಜೂರಾಗಿ ಆತನ ಹೆಸರಿನಲ್ಲಿ ಪ್ರತ್ಯೇಕ ಖಾತೆಗಳು ಇರುತ್ತವೆ ಎಂದರೆ ಸಾಕ್ಷಿಯು ನನಗೆ ಗೊತ್ತಿಲ್ಲದ ರೀತಿಯಲ್ಲಿ ಮಾಡಿಸಿಕೊಂಡಿರುತ್ತಾರೆ ಎಂದು ನುಡಿಯುತ್ತಾರೆ. 'ಡ' ಸಂಖ್ಯೆ: 1544 ರ ದಾಖಲೆಗೆ ನಾನು ಒಪ್ಪಿಗೆ ಸೂಚಿಸಿ ಸಹಿ ಮಾಡಿದ್ದೇನೆ ಎಂದರೆ ಸರಿಯಲ್ಲ.

4. ನಾನು ಮತ್ತು ಮೃತ 1 ನೇ ಪ್ರತಿವಾದಿಯು ಸರ್ವೇ ನಂಬರಃ 107 ಅದರ ಒಟ್ಟು ವಿಸ್ತೀರ್ಣ 5 ಎಕರೆ 30 ಗುಂಟೆ ಜಮೀನಿಗೆ ಸಂಬಂಧಿಸಿದಂತೆ ಮಾಲೀಕತ್ವವನ್ನು ಠರಾಯಿಸುವಂತೆ 3,7 ಮತ್ತು 8 ನೇ ಪ್ರತಿವಾದಿಗಳ ಮೇಲೆ ದಾವೆಯನ್ನು ಸಲ್ಲಿಸಿದ್ದೇವೆ ಎಂದರೆ ಸರಿ. 4 ನೇ ಪ್ರತಿವಾದಿಯು ನನಗೆ ಸಂಬಂಧಿ ಅಲ್ಲ. ಚನ್ನಬಸಪ್ಪ ಸುತ್ತಕೋಟಿ ಎಂಬುವವರು ನನ್ನ ತಾಯಿ ಬಸಮ್ಮ ಅವರಿಗೆ ತಂದೆ ಆಗಬೇಕು ಎಂದರೆ ಸರಿ. ಮೂಲಪುರುಷ ಬಸಪ್ಪ ಅವರು ನನಗೆ ಗೊತ್ತಿರುವುದಿಲ್ಲ. ಬಸಪ್ಪ ಅವರಿಗೆ 4 ಜನ ಗಂಡುಮಕ್ಕಳು ಇದ್ದರು ಎಂದರೆ ಸರಿಯಲ್ಲ. ಸಾಕ್ಷಿಯು ಮುಂದುವರೆದು ನಾಗಪ್ಪ, ಚನ್ನಬಸಪ್ಪ ಮತ್ತು ಮಲಪ್ಪ ಎಂಬ 3 ಜನ ಗಂಡು ಮಕ್ಕಳು ಇದ್ದರು ಎಂದು ನುಡಿಯುತ್ತಾರೆ.

5. ನನ್ನ ತಂದೆಯ 2 ನೇ ಹೆಂಡತಿಯಾದ ಗೌರಮ್ಮ ಇವರು ಮಲ್ಲಪ್ಪನ ಮಗಳು ಎಂದರೆ ಸರಿ. ದಾವಾ ಆಸ್ತಿಗಳಲ್ಲಿ ನನ್ನ ಸಹೋದರಿಯರಿಗೂ ಹಾಗೂ ನನ್ನ ತಂದೆಯ 2 ನೇ ಹೆಂಡತಿಯಾದ ಗೌರಮ್ಮ ಅವರ ಹೆಣ್ಣುಮಕ್ಕಳಾದ ಪ್ರತಿವಾದಿ 4 ರಿಂದ 6 ನೇ ಪ್ರತಿವಾದಿಗಳಿಗೂ ಸಹ ಸಮಾನವಾದ ಹಿಸ್ಸಯ ಹಕ್ಕು ಇದೆ ಎಂದರೆ ಸಾಕ್ಷಿಯು ಅವರಿಗೆ ಮದುವೆಯ ಸಂದರ್ಭದಲ್ಲಿ ಕೊಡಬೇಕಾದನ್ನು ನೀಡಿರುವುದರಿಂದ ಯಾವುದೇ ಹಿಸ್ಸೆಯ ಹಕ್ಕು ಇಲ್ಲ ಎಂದು ನುಡಿಯುತ್ತಾರೆ. ನನ್ನ ಸಹೋದರಿಯರಿಗೆ ಅವರ ಮದುವೆಯ ಸಂದರ್ಭದಲ್ಲಿ ಹಣವನ್ನು ಮತ್ತು ಬಂಗಾರವನ್ನು ಹಿಸ್ಸೆಯ ರೂಪದಲ್ಲಿ ನೀಡಿರುವ ಬಗ್ಗೆ ನನ್ನ ಬಳಿ ಯಾವುದೇ ದಾಖಲಾತಿಗಳು ಇಲ್ಲ. ನನ್ನ ತಂದೆಯ 2 ನೇ ಹೆಂಡತಿಯಾದ ಗೌರಮ್ಮ ಅವರಿಗೆ ಆಕೆಯ ತಂದೆಯ ಆಸ್ತಿಯಲ್ಲಿ ಸಮಾನ ಹಿಸ್ಸೆಯ ಹಕ್ಕು ಇರುತ್ತದೆ ಎಂದರೆ ಸಾಕ್ಷಿಯು ದಾವಾ ಆಸ್ತಿಗಳಿಗೂ ಅದಕ್ಕೂ ಸಂಬಂಧ ಇಲ್ಲ ಎಂದು ನುಡಿಯುತ್ತಾರೆ.

6. 1994 ರಲ್ಲಿ ಆದ ಕಂದಾಯ ದಾಖಲಾತಿಗಳು ನನ್ನ ಗಮನಕ್ಕೆ ಇದ್ದವು ಎಂದರೆ ಸರಿಯಲ್ಲ. ಸದರಿ ದಾಖಲಾತಿಗಳು ನನಗೆ 1994 ರಿಂದಲೂ ಗಮನಕ್ಕೆ ಇದ್ದರೂ ಸಹ ಅವುಗಳನ್ನು ಪ್ರಶ್ನೆ ಮಾಡಿಲ್ಲವಾದ್ದರಿಂದ ನನಗೆ ದಾವಾ ಆಸ್ತಿಗಳ ಮೇಲೆ ಹಕ್ಕು ಇಲ್ಲ ಎಂದರೆ ಸರಿಯಲ್ಲ. 1994 ರಲ್ಲಿ ಆಪಸಾತ್ ಹಿಸ್ಸೆ ಆಗಿದ್ದರೂ ಸಹ ಪ್ರತಿವಾದಿಗಳಿಗೆ ತೊಂದರೆ ಕೊಡಲು ಈ ಸುಳ್ಳು ದಾವೆಯನ್ನು ಸಲ್ಲಿಸಿದ್ದೇನೆ ಎಂದರೆ ಸರಿಯಲ್ಲ.

**<u>ಪಾಟೀ ಸವಾಲುಃ</u>** ಇತರೆ ಪ್ರತಿವಾದಿಗಳ ಪರ ವಕೀಲರಿಂದಃ

ಗೈರು ಹಾಜರು. ಪಾಟೀ ಸವಾಲಿಗೆ ಮುಂದೂಡಲು ಯಾವುದೇ ಕಾರಣಗಳು ಇರುವುದಿಲ್ಲ. ಆದ್ದರಿಂದ ಪಾಟೀ ಸವಾಲು ಇಲ್ಲ ಎಂದು ತೆಗೆದುಕೊಳ್ಳಲಾಯಿತು.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು)

ನನ್ನ ಸಮಕ್ಷಮ

Sd/-

ಓ ಹೇ ಕೇ ಸರಿ ಇದೆ.

ಹೆಚ್ಚುವರಿ ಸಿ.ಜೆ. ಮತ್ತು ಜೆ.ಎಮ್.ಎಫ್.ಸಿ.,
ಹಿರೇಕೆರೂರು.